# ಶ್ರೀಶಾರದೆ ಸರ್ವವಂದಿತೆ

ವಿಜಯ ಭಾರತಿ

*ಸಾಧಾರಣ ಮಹಿಳೆಯಂತೆ ಕಾಣಿಸಿಕೊಳ್ಳುವ ಶ್ರೀಶಾರದಾ ದೇವಿಯವರ ಅಸಾಧಾರಣ ಮಹಿಮೆಯನ್ನು ವಿವರಿಸಿರುವ ಶ್ರೀಮತಿ ವಿಜಯ ಭಾರತಿಯವರು ತಮ್ಮ ಬರಹಗಳು ಮತ್ತು ಉಪನ್ಯಾಸಗಳ ಮೂಲಕ ಶ್ರೀರಾಮಕೃಷ್ಣ ಭಕ್ತವೃಂದದಲ್ಲಿ ಸುಪರಿಚಿತರಾಗಿದ್ದಾರೆ.*

ಶ್ರೀರಾಮಕೃಷ್ಣ ಪರಮಹಂಸರು ಎಲ್ಲ ಧರ್ಮಗಳ ಸಮನ್ವಯದ ಅಮೃತಧಾರೆಯನ್ನು ಮಾನವಕೋಟಿಗೆ ಹರಿಸಿದಂತೆಯೇ ಸ್ತ್ರೀತ್ವದಲ್ಲಿನ ಪರಮಶ್ರೇಷ್ಠ ಸ್ವರೂಪವಾದ ಮಾತೃತ್ವವನ್ನು ಧರೆಯಲ್ಲಿ ಛದ್ರಬುನಾದಿಯ ಮೇಲೆ ಪ್ರತಿಷ್ಠಾಪಿಸಿದರು. ಅವರು ತಮ್ಮ ಕಠಿಣವಾದ ಸಾಧನೆಗಳಿಂದ ಧರ್ಮಸಮನ್ವಯದಲ್ಲಿಯೇ ಸರ್ವಶಾಂತಿ ಇದೆ ಎಂಬುದನ್ನು ಲೋಕಕ್ಕೆ ಹೇಗೆ ಕಾಣಿಸಿದರೋ ಅದರಂತೆ ಸ್ತ್ರೀಯಲ್ಲಿ ಮಾತೃತ್ವವನ್ನು ಕಾಣುವುದೇ ಪರಮೋನ್ನತ ಆಧ್ಯಾತ್ಮದರ್ಶನ, ಅದರಿಂದಲೇ ಮಾನವಲೋಕದ ಉದ್ಧಾರ ಎಂಬುದನ್ನೂ ಮನಗಾಣಿಸಿದರು.

ಶ್ರೀಶಾರದಾದೇವಿ ಅವರ ಈ ಮಹಾದರ್ಶನದ ಜೀವಂತ ಮೂರ್ತಿರೂಪ. ಐದು ವರ್ಷದ ಮುಗ್ಧಬಾಲೆಯಾಗಿದ್ದಾಗಲೆ ಶಾರದೆಯನ್ನು ತಮ್ಮ ಧರ್ಮಪತ್ನಿಯನ್ನಾಗಿ ತಾವೇ ಆಯ್ಕೆ ಮಾಡಿಕೊಂಡರು. ಭಿನ್ನವಿಲ್ಲದ ಮೂರ್ತಿಯನ್ನು ಅರ್ಚಕನೊಬ್ಬ ಪ್ರಾಣ ಪ್ರತಿಷ್ಠಾಪನೆಗೆ ಆಯ್ಕೆ ಮಾಡಿಕೊಳ್ಳುವಂತೆ ರಾಮಕೃಷ್ಣರು ಈ ಶುದ್ಧಭಾವದ ಮುಗ್ಧ ಕನ್ಯೆಯನ್ನು ತಮ್ಮ ಮುಂದಿನ ದಿವ್ಯಲೀಲೆಯ ಗುಪ್ತ ಸೂತ್ರಧಾರಿಣಿಯನ್ನಾಗಿ ಆಯ್ಕೆ ಮಾಡಿಕೊಂಡಿದ್ದರು.

ಅವತಾರವರಿಷ್ಠರೆಂದು ಪೂಜೆಗೊಳ್ಳುತ್ತಿರುವ ರಾಮಕೃಷ್ಣರು ತಮ್ಮ ಅವತರಣದ ವರಿಷ್ಠಶಕ್ತಿಯಾದ ಆದ್ಯಾಶಕ್ತಿಯನ್ನು ಶ್ರೀಶಾರದಾದೇವಿಯವರ ರೂಪದಲ್ಲಿ ಇಳೆಗೆ ಕರೆತಂದಿದ್ದರು. ದೈವತ್ವದ ಮಹತ್ತು ಕಣ್ಣಿಗೆ ಕಾಣಬೇಕಾದರೆ ಹೃದಯ ಶುದ್ಧವಾಗಿರಬೇಕು, ಹೃದಯಶುದ್ಧವಾಗಿರಬೇಕಾದರೆ ಮಾತೃಭಾವದ ಉದ್ದೀಪನೆಯ ತರಂಗ ನಿರಂತರವಾಗಿ ಅಂತರಂಗದಲ್ಲಿ ಮೊರೆಯುತ್ತಲೇ ಇರಬೇಕು. ಹಾಗೆ ಮೊರೆಯುತ್ತಲೇ ಇರಬೇಕಾದರೆ ಅಂತಹ ಒಂದು ಜೀವನದರ್ಶನವನ್ನು ಅಭಿವ್ಯಕ್ತಗೊಳಿಸಬಲ್ಲ ಒಂದು ಮೂರ್ತರೂಪ ಆವಿರ್ಭವಿಸಿರಬೇಕು. ಈ ಉದ್ದೇಶಕ್ಕಾಗಿಯೇ ಶ್ರೀಮಾತೆ ಶಾರದಾದೇವಿಯವರು ಆವಿರ್ಭವಿಸಿದರು.

ಶಾರದೆಯ ವಿವಾಹ ಶ್ರೀರಾಮಕೃಷ್ಣರೊಂದಿಗೆ ಆದುದು ಲೋಕದ ಕಣ್ಣಿಗೆ ಒಂದು ಸಾಮಾನ್ಯ ಘಟನೆ. ಕೆಲವರಿಗೆ ವಿಚಿತ್ರ ಘಟನೆಯಾಗಿಯೂ ಕಾಣಬಹುದು. ಆದರೆ ವಿಶ್ವಸಂಕಲ್ಪದ ದೃಷ್ಟಿಗೆ ಅದೊಂದು ಅತ್ಯಾವಶ್ಯಕವಾದ ಮಹತ್ವದ ಘಟನೆ. ಶ್ರೀರಾಮಕೃಷ್ಣರು ತಮ್ಮ ಹಲವು ವರ್ಷಗಳ ಸಾಧನಾಫಲದ ಅಮೃತ ಕುಂಭವನ್ನು ಶಿರದಲ್ಲಿ ಧರಿಸುವ ವಿಶೇಷ ಕಾರ್ಯಕ್ಕಾಗಿ ಶ್ರೀಮಾತೆಯವರೊಡನೆ ವಿವಾಹವಾಗಿದ್ದರು. ಸಂಚಯನದಷ್ಟೇ ಮಹತ್ವವಾದುದು ಸಂಚಾಲನ ಶಕ್ತಿ. ಆದಕ್ಕಾಗಿಯೇ ಅವರು ಶಕ್ತಿ ಸಹಿತರಾಗಿ ಅರ್ಧನಾರೀಶ್ವರನಾಗಿ ನಿಂತರು.

ಮುಂದೆ ನಡೆದ ಷೋಡಶೀ ಪೂಜೆ ಈ ಉದ್ದೇಶದ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಖ್ಯಾತ ಕವಿಗಳೂ, ಶ್ರೀರಾಮಕೃಷ್ಣರ ಶ್ರೇಷ್ಠ ಭಕ್ತರೂ ಆಗಿದ್ದ ಕುವೆಂಪುರವರು ಈ ಅಪೂರ್ವ ಘಟನೆಯನ್ನು ಕಾವ್ಯಮಯವಾಗಿ ವರ್ಣಿಸಿದ್ದಾರೆ. ಅವರ ಚಿಂತನೆ ಹೀಗಿದೆ: "ಅವರಿಬ್ಬರ ಋಷಿದಾಂಪತ್ಯ ಪರಸ್ಪರ ಒಡಂಬಡಿಕೆಯಿಂದ ಆದ ದಾಂಪತ್ಯ. ಶ್ರೀರಾಮಕೃಷ್ಣರ ಮಹಾತ್ಯಾಗ ಒಂದು ಕಡೆ, ಶ್ರೀಮಾತೆಯವರ ಮಹಾಭಿಕ್ಷೆ ಇನ್ನೊಂದು ಕಡೆ. ಎರಡೂ ಮಹತ್ತರವಾದದ್ದೇ. ಜಗತ್ತಿನಲ್ಲಿ ತ್ಯಾಗಿಗಳು ಅನೇಕರು ಬಂದು ಸಂದಿದ್ದಾರೆ. ರಾಜ್ಯ ಪರಿತ್ಯಾಗ ಮಾಡಿದವರಿದ್ದಾರೆ, ಪತ್ನಿಪುತ್ರರನ್ನು ತ್ಯಾಗ ಮಾಡಿದವರಿದ್ದಾರೆ, ಐಹಿಕಭೋಗ, ಸ್ವಂತ ಸೌಖ್ಯವನ್ನೇ ತ್ಯಾಗಮಾಡಿದವರೂ ಇದ್ದಾರೆ. ಆದರೆ ತ್ಯಾಗವನ್ನೇ ತ್ಯಾಗ ಮಾಡುವವರು ಯಾರಿದ್ದಾರೆ? ನಿರಂತರ ಕಠಿಣ ಸಾಧನೆಗಳಿಂದ ಸಿದ್ಧಿಪಡೆದು ಬಹು ಕಠೋರ ತಪಸ್ಸಿನಿಂದ ಅರ್ಜಿಸಿದ ತಪೋಶಕ್ತಿಯನ್ನೇ ತ್ಯಾಗಮಾಡಲು ಸಿದ್ಧರಾಗಿದ್ದ ರಾಮಕೃಷ್ಣರಂತಹ ಜೀವಜ್ಯೋತಿಗಳು ಯಾರಿದ್ದಾರೆ? ಯಾರಿದ್ದಾರೆ? ಯಾರೂ ಇಲ್ಲ. ಇವರಿಬ್ಬರ ಈ ಪಾವನ ಸ್ರೋತವು ಗಂಗೆಗೆ ಗಂಗೆಯಾಗಿದೆ." "ಷೋಡಶೀ ಪೂಜೆಯು ಶ್ರೀರಾಮಕೃಷ್ಣರ ಸಾಧನಾ ಜೈತ್ರಯಾತ್ರೆಯಲ್ಲಿ ಕಿರೀಟಪ್ರಾಯವಾದುದು. ಈ ಸಾಧನೆಯಲ್ಲಿ ಅವರ ಜೈತ್ರಯಾತ್ರೆ ಜ್ಯೋತಿರ್ಮಯವಾಗಿ ಕೊನೆಮುಟ್ಟಿತು." ಕುವೆಂಪುರವರ ಈ ಚಿಂತನೆಯಲ್ಲಿ ಅವರ ಸೂಕ್ಷ್ಮದೃಷ್ಟಿ, ಧನ್ಯಭಾವ ಎರಡನ್ನೂ ಕಾಣಬಹುದು. ಸ್ವಾಮಿ ಶಾರದಾನಂದರು ಶ್ರೀರಾಮಕೃಷ್ಣರ ಸಾಧನೆ ಒಂದು ಮಹಾಯಜ್ಞ, ಹನ್ನೆರಡು ವರ್ಷಗಳಷ್ಟು ಸುದೀರ್ಘಕಾಲ ನಡೆದ ಈ ಯಜ್ಞಕ್ಕೆ ಷೋಡಶೀ ಪೂಜೆ ಪೂರ್ಣಾಹುತಿಯಾಯಿತು ಎಂದಿದ್ದಾರೆ. ಇಷ್ಟು ವಿಸ್ತೃತವಾದ ಗಭೀರವಾದ ಅರ್ಥವನ್ನೊಳಗೊಂಡ ಶ್ರೀಶಾರದಾದೇವಿ ಮತ್ತು ಶ್ರೀರಾಮಕೃಷ್ಣರ ಯೌಗಿಕ ಸಂಬಂಧ ಇತಿಹಾಸದ ಪುಟಗಳಲ್ಲಿ ಕಾಣಸಿಗದ ಅಪರೂಪ ಸಂಬಂಧ.

ದಕ್ಷಿಣೇಶ್ವರದ ನಹಬತ್‌ಖಾನೆಯ ವಾದ್ಯವೃಂದದ ಮನೆಯು ಕೇವಲ ಮನೆಯಾಗಿರದೆ ಅಷ್ಟಮೂಲೆಯ ಮಂಡಲವಾಗಿ ಶ್ರೀಮಾತೆ ಅಲ್ಲಿ ಪ್ರತಿಷ್ಠಾಪಿತರಾದರು. ಶ್ರೀರಾಮಕೃಷ್ಣರ ದೇವಶಿಲ್ಪದ ದಿವ್ಯಲೀಲೆಗೆ ಅವರು ಗುಪ್ತಶಕ್ತಿಯಾಗಿ ತೆರೆಯಮರೆಯಲ್ಲಿ ನೆಲೆ ನಿಂತರು.

ಜಯರಾಮಬಟಿಗೂ ಕಲ್ಕತ್ತೆಗೂ ಅವರ ಸಂಚಾರ ನಡೆದೇ ಇತ್ತು ತೂಗುಯ್ಯಾಲೆಯಂತೆ ! ಸ್ವಕುಟುಂಬ ಮತ್ತು ವಿಶ್ವ ಕುಟುಂಬದ ಈ ಸಮತೋಲನ ಸಾಂತತೆಗೂ-ಅನಂತತೆಗೂ ನಿರ್ಮಿಸಿದ ಸೋಪಾನದಂತೆ ಇದೆ. ಶ್ರೀರಾಮಕೃಷ್ಣರಂತೆ ಭಕ್ತರೊಡನೆ ನರ್ತನ-ಸಂಕೀರ್ತನೆಗಳ, ಸಲ್ಲಾಪ -ಸಂಭಾಷಣೆಗಳ ಆನಂದ ನಂದನದ ನಡುವೆ ಅವರು ವಿಹರಿಸುವಂತಿರಲಿಲ್ಲ. ಲಟ್ಟಣಿಗೆ ಮಣೆಗಳ, ಪಾತ್ರೆಪರಿಕರಗಳ ನಡುವೆ ಅವರ ಜೀವನಧರ್ಮಯೋಗ ಸೌಮ್ಯವಾಗಿ ಸದ್ದಿಲ್ಲದೆ ಸಾಗುತ್ತಿತ್ತು. ಮಾತೃತ್ವದ ನಿರ್ವಹಣೆಯ ಗುರುತರ ಜವಾಬ್ದಾರಿಯಿಂದಾಗಿ ಅವರು ಸಮಾಧಿಯ ಆನಂದವನ್ನು ಬದಿಗಿರಿಸಬೇಕಾಯ್ತು. ಅವರ ಅಡಿಗೆ ಮನೆಯೇ ಎಲ್ಲ ಅಧ್ಯಾತ್ಮ ತತ್ತ್ವದರ್ಶನಗಳ ಮೂಲಸ್ಥಾನವಾಯಿತು. ಈ ಮಹಾಯೋಗಿನಿಯ ಕೈಯಲ್ಲಿ ಅನ್ನಪ್ರಸಾದ ಸ್ವೀಕರಿಸಿದವರೆಲ್ಲ ಯೋಗಿಗಳೇ ಆದರು.

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ವೈಧವ್ಯವನ್ನೂ ಒಂದು ವಿಧಿಸಂಕಲ್ಪವಾಗಿ ಲೋಕದ ಸಾಮಾನ್ಯಸ್ತರದಲ್ಲಿ ಸ್ವೀಕರಿಸಿದರೂ ಆಂತರ್ಯದಲ್ಲಿ ಶ್ರೀರಾಮಕೃಷ್ಣ ಚೈತನ್ಯ ಅವರಲ್ಲಿ ಅಂತರ್ಗತವಾಗಿರುವುದನ್ನು ಒಳಗಣ್ಣಿನಿಂದ ಕಾಣುವವರೆಲ್ಲ ಕಾಣಬಹುದಾಗಿತ್ತು. ವಿದ್ಯಾವಂತರೂ, ಅವಿದ್ಯಾವಂತರೂ, ಸಾಮಾನ್ಯರೂ, ಅಸಾಮಾನ್ಯರೂ, ಭಿಕ್ಷುಕರೂ, ಲಕ್ಷಾಧಿಪತಿಗಳೂ, ಪ್ರಾಪಂಚಿಕರೂ, ಭಕ್ತರೂ ಎಲ್ಲರೂ ಅವರ ಮಾತೃವಾತ್ಸಲ್ಯದ ಸೆರಗಿನ ಮಡಿಲಲ್ಲಿ ಆಶ್ರಯ ಪಡೆದು ಬೆಳಕನ್ನು ಕಂಡರು.

ವೇದಿಕೆಯ ಮೇಲೆ ನಿಂತು ವಿದ್ವತ್ಪೂರ್ಣವಾದ ಉಪನ್ಯಾಸ ನೀಡದೆ ಮೆಲುದನಿಯಲ್ಲಿ ಮುಸುಕಿನ ಮರೆಯಲ್ಲಿಯೆ ಜೀವಿಯ ಅಜ್ಞಾನದ ತೆರೆ ಸರಿಸಿದರು. ಮಾತೃತ್ವದ ಮಹಾಸ್ತ್ರದಿಂದಲೇ ಮಾನವರಲ್ಲಿನ ಆಸುರೀಶಕ್ತಿಯನ್ನು ದಮನಗೊಳಿಸಿದರು. ಕಾಣುವಂತೆ ಯಾವ ಸುದೀರ್ಘ ತಪಸ್ಸನ್ನೂ ಆಚರಿಸದೆ ನಿಂತ ನೆಲೆಯನ್ನೇ ಸಾಧನಾ ಕ್ಷೇತ್ರವಾಗಿಸಿಕೊಂಡು, ಕೈಗೆ ಬಂದ ಕಾರ್ಯವನ್ನೇ ತಪಸ್ಸಾಗಿ ಮಾಡಿಕೊಂಡು ನೂರಾರು ತಪಸ್ವಿಗಳಿಗೆ ಮಾರ್ಗದರ್ಶಕರಾದರು. ಈ ಗುಪ್ತ ತಪಸ್ವಿನಿಯು ತನ್ನ ಸ್ವರೂಪ ರಹಸ್ಯಗಳನ್ನೆಲ್ಲ ರಹಸ್ಯವಾಗಿಯೇ ಇರಿಸಿಕೊಂಡಿದ್ದಾರೆ. ಬಳಿಗೆ ಬಂದು ನಿಜವಾದ ಹಸಿವು ದಾಹಗಳಿಂದ ಕೋರಿಕೊಂಡವರಿಗೆ ಮಾತ್ರ ತೆರೆ ಸರಿದು ನಿಜರೂಪದ ದರ್ಶನವಾದೀತು.

ಇಂದಿನ ಆಧುನಿಕ ಸಮಾಜ ಯಾವುದನ್ನು ಸಾಮಾಜಿಕ ಜಾಗೃತಿ, ವ್ಯಕ್ತಿತ್ವ ನಿರ್ಮಾಣ ಕಾರ್ಯ ಎಂದು ದೊಡ್ಡ ದೊಡ್ಡ ಮಾತುಗಳಲ್ಲಿ ಹೇಳಿ ತನ್ನ ವಾಗ್ವಿಲಾಸವನ್ನಷ್ಟೇ ಕಾಣಿಸುತ್ತದೋ ಅದನ್ನು ಶ್ರೀಶಾರದಾದೇವಿಯವರು ಮೌನವಾಗಿಯೇ ತಮ್ಮದೇ ಆದ ವಿಶೇಷ ರೀತಿಯಲ್ಲಿ ನಡೆಸಿದರು.

ಸ್ವಾಮಿ ಗಂಭೀರಾನಂದರು ಶ್ರೀಮಾತೆಯವರ ಅವತರಣದ ವಿಶೇಷತೆಯನ್ನು ವಿವರಿಸುತ್ತಾ, "ಸ್ತ್ರೀತ್ವದ ಪಾವಿತ್ರ್ಯ, ಔನ್ನತ್ಯಗಳು ಇಂದಿಗೂ ಬಿಕ್ಕಟ್ಟಿನ ಸ್ಥಿತಿಯನ್ನೇ ಎದುರಿಸುತ್ತಿವೆ. ಇಂತಹ ಸಮಯದಲ್ಲಿ ಹಿರಿಯ ಆದರ್ಶವನ್ನು ತೋರಿ ಪ್ರೇರಕಶಕ್ತಿಯಾಗಿ ನಿಲ್ಲಬೇಕಾದರೆ ತಾಯಿ-ಗುರು-ದೈವ ಈ ಮೂರರ ಸಂಗಮ ಸ್ವರೂಪಕ್ಕೆ ಮಾತ್ರ ಸಾಧ್ಯ. ಶ್ರೀಶಾರದಾದೇವಿಯವರ ಅವತರಣದ ಉದ್ದೇಶ ಇದೇ. ಇಂದಿಗೂ ಅದು ತನ್ನ ಸತ್ವವನ್ನು ಪೂರ್ಣ ರೂಪದಲ್ಲಿ ಹರಿಸುತ್ತಲೇ ಇದೆ" ಎಂದಿದ್ದಾರೆ.

ಗಂಗಾ ಪಾಪಂ ಶಶೀ ತಾಪಂ ದೈನ್ಯಂ ಕಲ್ಪತರುಸ್ತಥಾ ।
ಪಾಪಂ ತಾಪಂ ಚ ದೈನ್ಯಂ ಚ ಹಂತಿ ಸಂತೋ ಮಹಾತ್ಮನಃ ॥

*"ಗಂಗೆಯು ಪಾಪವನ್ನೂ ಚಂದ್ರನು ತಾಪವನ್ನೂ ಕಲ್ಪತರುವು ದೈನ್ಯವನ್ನೂ ಹೋಗಲಾಡಿಸುತ್ತವೆ. ಆದರೆ ಸಂತರಾದ ಮಹಾತ್ಮರು ಈ ಮೂರನ್ನೂ ಹೋಗಲಾಡಿಸುತ್ತಾರೆ."* ಜೀವಿಗಳ ಪಾಪವನ್ನು ತಮ್ಮ ಕರುಣೆಯಿಂದ, ತಾಪವನ್ನು ತಮ್ಮ ವಾತ್ಸಲ್ಯದ ತಂಪಿನಿಂದ, ದೈನ್ಯವನ್ನು ತಮ್ಮ ಸಾಂತ್ವನದ ಭರವಸೆಯಿಂದ ಒಪ್ಪಗೊಳಿಸುತ್ತಿದ್ದ ಶ್ರೀಮಾತೆಯವರ ವ್ಯಕ್ತಿತ್ವದಲ್ಲಿನ ದೈವಿಕತೆಯ ಸೆಳೆಮಿಂಚು ಸುಲಭಗೋಚರವಾದುದಲ್ಲ.

ಲೌಕಿಕವಿದ್ಯೆಯ ಗಂಧಗಾಳಿಯೇ ಇಲ್ಲದ ಈ ಸರಳ ಮುಗ್ಧ ಸ್ತ್ರೀಯಲ್ಲಿ ಗಿರೀಶ್‌ಚಂದ್ರಘೋಷ್‌ರವರಂತಹ ಖ್ಯಾತ ನಾಟಕಕಾರರು ಜಗನ್ಮಯಿಯನ್ನು ಕಂಡರು, ಮಹೇಂದ್ರನಾಥ ಗುಪ್ತರಂತಹ ಶಿಕ್ಷಣ ತಜ್ಞರು ಜ್ಞಾನಸ್ವರೂಪಿಣಿಯನ್ನು ಕಂಡರು, ಸ್ವಾಮಿ ವಿವೇಕಾನಂದರಂತಹ ಪ್ರಚಂಡ ವಾಗ್ಮಿ ಅವರ ಮೆಲುದನಿಯ ಅಂತರಾರ್ಥವನ್ನು ತಿಳಿದು ಮೌನ ತಾಳಿದರು. ಇದು ಎಂತಹ ವ್ಯಕ್ತಿವಿಶೇಷ ! ಇದು ಪ್ರಶ್ನೆಯೂ ಹೌದು, ಆಶ್ಚರ್ಯವೂ ಹೌದು. ಯಾರು ಯಾರಿಗೆ ಯಾವ ಯಾವ ಭಾವ, ರೂಪಗಳಲ್ಲಿ ಮೈದೋರಬೇಕೊ ಹಾಗೆಯೇ ತೋರಿ ಅವರ ಉದ್ಧಾರದ ದ್ವಾರ ತೆರೆದ ನಿಗೂಢ ಸತ್ಯ ಮೇಲ್ನೋಟಕ್ಕೆ ನಿಲುಕದ ಮಾತು.

ಇಂದಿನ ಯಾಂತ್ರಿಕ ಯುಗಕ್ಕೆ, ಬೆಡಗಿನ ಭ್ರಮೆಯ ಸುಳಿಯ ಸೆಳೆತಕ್ಕೆ—ಶ್ರೀಮಾತೆಯವರಿಂದ ಹೇಗೆ ಪರಿಹಾರ ಒದಗೀತು? ಸಂಪತ್ತು-ಅಧಿಕಾರ, ಕೀರ್ತಿ-ಖ್ಯಾತಿಗಳ ಹಿಂದೆ ಮಾನವತೆಯನ್ನೂ ಮರೆತು ಓಡುತ್ತಿರುವ ಇಂದಿನ ಮಾನವ ಜನಾಂಗ ಇಷ್ಟು ಮುಗ್ಧ, ಶಾಂತ, ಮೌನ, ಅನಕ್ಷರಸ್ಥ, ಸ್ತ್ರೀಯಿಂದ ಏನನ್ನು ತಾನೇ ಪಡೆದೀತು? ಎಂದು ಸಾಮಾನ್ಯ ಮನುಷ್ಯರು ಅವರತ್ತ ಕಣ್ಣು ಹಾಯಿಸದೇ ಹೋಗಬಹುದು. ಆದರೆ ಪರಮಶ್ರೇಷ್ಠವಾದ ದೈವೀ ಸ್ವರೂಪ ಯಾವಾಗಲೂ ಅತ್ಯಂತ ಸರಳವೇ. ಅದು ಇದ್ದು ಇಲ್ಲದಂತೆಯೇ ಇದ್ದು ಎಲ್ಲವನ್ನೂ ಸದ್ದುಗದ್ದಲವಿಲ್ಲದೆ ನಡೆಸಿಕೊಂಡು ಹೋಗುತ್ತದೆ. **ಕಾರ್ಯಸಿದ್ಧಿಃ ಸತ್ತ್ವೇ ಭವತಿ ಮಹತಾಂ ನ ತು ಉಪಕರಣೇ**—"ಮಹಾತ್ಮರಲ್ಲಿ ಕಾರ್ಯಸಿದ್ಧಿಯು ಅವರ ಅಂತಸ್ಸತ್ವದಿಂದಲೇ ಉಂಟಾಗುತ್ತದೆ, ಉಪಕರಣಗಳಿಂದಲ್ಲ."

ಶ್ರೀರಾಮಕೃಷ್ಣರು ಮಾತ್ರ ಇಳೆಗಿಳಿದು ಬಂದು ಶ್ರೀಶಾರದಾದೇವಿಯವರು ಬಾರದೆ ಹೋಗಿದ್ದರೆ, ರಾಮಕೃಷ್ಣರ ಶಾರೀರಿಕ ಹಾಗೂ ಆಧ್ಯಾತ್ಮಿಕ ಸಂರಕ್ಷಣೆ ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ರಾಮಕೃಷ್ಣರ ಮಹಾಸಮಾಧಿಯ ನಂತರ ಅವರ ಆಧ್ಯಾತ್ಮಿಕ ಸಂಪತ್ತು ಅವರ ಶಿಷ್ಯರಲ್ಲಿ ಏಕೀಭವಿಸಿ ಒಂದು ಮಹಾಸಂಸ್ಥೆಯಾಗಿ ರೂಪುಗೊಂಡು ಸ್ಥಾಪನೆಗೊಳ್ಳುತ್ತಿರಲಿಲ್ಲ. ವಿಶ್ವವನ್ನು ಸೃಜಿಸಿ ಪಾಲಿಸುತ್ತಿರುವ ಮಾತೃಸ್ವರೂಪದ ಜೀವಂತ ದರ್ಶನ ಲಭ್ಯವಾಗುತ್ತಿರಲಿಲ್ಲ. ತಾಯಾಗಿ, ಗುರುವಾಗಿ, ದೈವವಾಗಿ ಅವರು ಸರ್ವವಂದಿತರಾಗಿದ್ದಾರೆ. ಅವರ ಶ್ರೀಚರಣದ ಹಿರಿಮೆ ನಮಿಸಿದವರಿಗೆಲ್ಲ ಲಭ್ಯ.